## ಶ್ರೀ ಎಂ. ಚಿದಾನಂದ ಮೂರ್ತಿಯವರ ಮೇಲೆ ಹಕ್ಕು ಭಾದ್ಯತಾನಿರ್ಣಯ

K. H. PATIL I have moved a privilege motion against one Sri M Chidananda Murthy. ಹಿಂದೊಮ್ಮೆ ಇದೇ ಸದನದಲ್ಲಿ ಶ್ರೀ ಪಾಟೀಲ ಪುಟ್ಟಪ್ಪನವರ ಸಭಾನಿಯೇಮ ವಿರೋಧಿ ಹಾಗೂ ಸಭಾನಿಂದನೆ ವಿಷಯಗಳ ಬಗ್ಗೆ ಸುಧೀರ್ಘವಾದ ಚರ್ಚೆಯಾಗಿ ಸರ್ವಪಕ್ಷಗಳ ಸಮ್ಮತಿಯಿಂದ ತಾವು ಆ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳಿಸಿದಂತ್ತೀರಿ. ಇದು ಶ್ರೀ ಪಾಟೀಲ್ ಪುಟ್ಟಪ್ಪನವರು ಅಧ್ಯಕ್ಷರ ವಿರೋಧಾತ್ಮಕ ಹಾಗೂ ಸಭೆ ಗೌರವಕ್ಕೆ ವಿರುದ್ಧವಾಗಿ ವರ್ತಿಸಿದ ವರ್ತನೆಗೆ ತೀರಾ ಸೌಮ್ಯರೂಪದ ಶಿಕ್ಷೆ. ಆದಾಗ್ಯೂ ಓರ್ವ ಎಂ. ಚಿದಾನಂದ ಮೂರ್ತಿ, ಪ್ರಧಾನ ಸಂಪಾದಕ, ಸಾಹಿತಿಗಳ ಕಲಾವಿದರ ಬಳಗ, ಬೆಂಗಳೂರು ಎಂಬ ಶಿರೋನಾಮೆಯಲ್ಲಿ ದಿನಾಂಕ ೨೧-೨-೧೯೮೭ರಂದು ಪತ್ರಿಕಾ ಹೇಳಿಕೆ ಹೊರಡಿಸಿ ಅದರ ಪ್ರತಿಗಳನ್ನು ಅಂಚೆ ಮೂಲಕ ಶಾಸಕರಿಗೂ, ಹೊರಗಿನವರಿಗೂ ಕಳಿಸಿದ್ದಾರೆ. ಅಲ್ಲದೆ ಕರ್ತವ್ಯನಿರತ ಶಾಸಕರ ವಿರುದ್ಧ ಬಹಿರಂಗ ಪ್ರಕಟಣೆ ಮಾಡಿ ಅವರೂ ಸಹ ಈ ಘನವೆತ್ತ ಸದನಕ್ಕೆ ಹಾಗೂ ಅದರ ನಡುವಳಿಕೆಗೆ ಅಗೌರವ ತೋರಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಶ್ರೀ ಎಂ. ಚಿದಾನಂದಮೂರ್ತಿಯವರ ನಡತೆಯ ವಿಚಾರಣೆಯಾಗಿ ಅವರಿಗೆ ಕಾನೂನಿನನ್ವಯ ಈ ಸದನಕ್ಕೂ, ಶಾಸಕರಿಗೂ ಅಗೌರವವೆಸಗಿದ ಅಪರಾಧಕ್ಕಾಗಿ ತಕ್ಕ ಶಾಸ್ತಿಯಾಗಬೇಕೆಂದು ನಾನು ಈ ಹಕ್ಕುಬಾಧ್ಯತಾ ಚ್ಯುತಿ ಕುರಿತು ನಿರ್ಣಯವನ್ನು ತರಬಯಸುತ್ತೇನೆ. ಇದರ ಜೊತೆಗೆ ನನಗೆ ಟಲಿಗ್ರಾಮಿನಲ್ಲಿ ಬಂದ ಅವರ ಪ್ರಕಟಣೆಯ ಪ್ರತಿಯೊಂದನ್ನು ಹಾಗೂ ಇದೇ ವಿಷಯದಲ್ಲಿ ಪಾಟೀಲ್ ಪುಟ್ಟಪ್ಪನವರು ಪ್ರಕಟಿಸಿದ ಪ್ರಕಟಣೆಯನ್ನು ತಮ್ಮ ಆಫೀಸಿಗೆ ಮೊದಲೇ ಕೊಟ್ಟಿದ್ದೇನೆ. ಆದ್ದರಿಂದ ಇದರಲ್ಲಿ ವಿಷಯಗಳು ಹೇಳತಕ್ಕದ್ದು ಏನಿಲ್ಲ. ಮಾನ್ಯ ಸಭಾಧ್ಯಕ್ಷರೆ ಈ ವಿಷಯದ ಬಗ್ಗೆ ಎರಡು ಸದನಗಳ ಸದಸ್ಯರು ಒಮ್ಮತದ ಅಭಿಪ್ರಾಯವನ್ನು ವ್ಯಕ್ತ ಮಾಡಿ ಪಾಟೀಲ್ ಪುಟ್ಟಪ್ಪನವರನ್ನು ಶಿಕ್ಷೆಗೆ ಗುರಿ ಮಾಡಬೇಕೆಂಬ ಅಭಿಪ್ರಾಯವನ್ನು ಎಲ್ಲರೂ ವ್ಯಕ್ತ ಮಾಡಿದರು. ಆದರೆ ಔದಾರ್ಯಯುತವಾಗಿ ಇಲ್ಲಿ ಶಿಕ್ಷೆ ಮಾಡುವ ಬದಲು ಹಕ್ಕುಬಾಧ್ಯತಾ ಸಮಿತಿಗೆ ಹೋಗಬೇಕೆಂದು ಬಿಟ್ಟಿಕೊಟ್ಟಿರಿ. ತಪ್ಪು ನಿರ್ಣಯವನ್ನು ನಾವು ಎಲ್ಲರೂ ಶಿರಸಾವಹಿಸಿ ಮನ್ನಿಸಿದೆವು. ಪುನಃ ಈ ಸದನದಲ್ಲಿ ಇದಂತಹ ನಡವಳಿಕೆಗಳ ಬಗ್ಗೆ ಬೇರೆ ಬೇರೆಯಾದ ರೀತಿಯಲ್ಲಿ, ಅದಕ್ಕೆ ಬೇರೆ ಬೇರೆ ರೂಪ ಕೊಟ್ಟು ಪ್ರಕಟಣೆ ಮಾಡಿದ್ದಾರೆ. ಇದರಿಂದ ಜನರಿಗೆ ಬಹಿರಂಗವಾಗಿ ಶಾಸಕರ ವಿರುದ್ಧ ತಪ್ಪು ಅಭಿಪ್ರಾಯ ಕಲ್ಪನೆಯಾಗುವ ರೀತಿಯಲ್ಲಿ ವರ್ತಿಸಿದ್ದಾರೆ. ಇವರು ಸಾಹಿತಿ ಎನ್ನುವ ಒಂದೇ ಒಂದು ಹೆಸರಿನಿಂದ ಈ ರೀತಿ ಬರೆದಿದ್ದಾರೆ. ಇವರು ಸಾಹಿತಿಯೇ ಎನ್ನುವ ಶಂಕೆ ನಮ್ಮ ಎದುರಿಗೆ ಬರುತ್ತದೆ? ಸಾಹಿತ್ಯವನ್ನು ಮನುಷ್ಯತ್ವದಿಂದ ನೋಡಬೇಕು. ಹೃದಯ ತೆರೆದು ನೋಡಬೇಕು. ಹೃದಯ ಇಲ್ಲದವರಿಗೆ ಸಾಹಿತಿ ಸಾಹಿತಿ ಅಲ್ಲವೇ ಅಲ್ಲ. ಸಾಹಿತಿ ಎನ್ನುವ ನೆವದಿಂದ ಏನು ಮಾಡಿದರೂ ಮನ್ನಿಸಿ ಹಾಕುತ್ತದೆ. ಎನ್ನುವ ಉದ್ಧಟತನದ ವರ್ತನೆ ಏನಿದೆ, ಆ ವರ್ತನೆಗೆ ಪೂರ್ಣ ವಿರಾಮವನ್ನು ಹಾಕಬೇಕಾಗುತ್ತದೆ. ಆ ದೃಷ್ಟಿಯಿಂದ ಇವರನ್ನು ಸರ್ವಾನುಮತದಿಂದ ಒಪ್ಪಿ ಶ್ರೀ ಎಂ. ಚಿದಾನಂದ ಮೂರ್ತಿಯವರನ್ನು ಇಲ್ಲಿಗೆ ಕರೆಯಿಸಿ ಶಾಸ್ತಿ ಮಾಡಿ ಅಥವಾ ಪುಟ್ಟಪ್ಪನವರ ಜೊತೆಗೆ ಇವರನ್ನು ಹಕ್ಕು ಭಾದ್ಯತಾ ಸಮಿತಿಗೆ ಕಳುಹಿಸಬೇಕು. ನಾನು ಈಗಾಗಲೇ ಅವರು ಬರೆದಿರುವಂತಹ ಪ್ರಕಟಣೆಯನ್ನು ತಮ್ಮ ಅವಾಹನೆಗೆ ಕಳುಹಿಸಿದ್ದೇನೆ. ಅದರಲ್ಲಿ ಮುಖ್ಯ ವಾದುದನ್ನು ಇಲ್ಲಿ ಓದಿ ಹೇಳುವುದಾದರೆ,

> ''ಶ್ರೀ ಪುಟ್ಟಪ್ಪನವರ ಮೇಲೆ ಯಾವುದೇ ತರದ ಶಿಕ್ಷೆಯನ್ನು ತಂದರೂ ಅದು ಕನ್ನಡದ ಹಿನ್ನಡೆಗೆ ಕಾರಣವಾಗುತ್ತದೆಯೆಂದು ಬಳಗದ ವಿಚಿತ ಅಭಿಪ್ರಾಯವಾಗಿದೆ. ಅದನ್ನು ವಿರೋಧಿ ಶಾಸಕರು ಹಕ್ಕು ಚ್ಯುತಿ ನಿರ್ಣಯವನ್ನು ತಂದರೆ ನಾಡಿನಾದ್ಯಂತ ಕನ್ನಡ ಕನ್ನಡ ಜನತೆ ಶಾಸಕರ ನಿಲುವನ್ನು ಖಂಡಿಸಬೇಕೆಂದು ಬಳಗವು ಕರೆ ಕೊಡುತ್ತದೆ''

ಎಂದು ಹೇಳಿದ್ದಾರೆ. ಬಳಗ ಏನು ಮಾಡಬೇಕು. ಯಾವ ಬಳಗ ಅದು. ಬರದದ್ದೇ ಬಳಗ ಆಗಿರುವುದರಿಂದ, ಅವರ ಮೇಲೆ ಹಕ್ಕುಚ್ಯುತಿ ನಿರ್ಣಯವನ್ನು ತರುವುದಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ ತಾವು ಅದಕ್ಕೆ ಅನುಮತಿಯನ್ನು ಕೊಟ್ಟು ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.— ಈ ಪ್ರಶ್ನೆಯನ್ನು ಪರಿಶೀಲನೆಗಾಗಿ, ತನಿಖೆಗಾಗಿ ಅಥವಾ ಪರದಿಗಾಗಿ ಹಕ್ಕಿ ಭಾದ್ಯತೆ ಸಮಿತಿಗಾಗಿ ಕಳುಹಿಸಿಕೊಡುತ್ತಿದ್ದೇನೆ.

## ಗಮನ ಸೆಳೆವ ಸೂಚನೆ

### ಹೊಳೆ ಹೊನ್ನೂರು ಮಂಕಲ ಪಂಚಾಯಿತಿ ವ್ಯಾಪ್ತಿಯಲ್ಲಿ ಜಂಬರಗಟ್ಟಿ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತೆಯನ್ನು ಕೊಲೆಗೈದಿರುವುದು

ಶ್ರೀ ಕೆ. ಎಚ್. ಶ್ರೀನಿವಾಸ.— ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಚಂಬರಗಟ್ಟಿ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತೆಯನ್ನು ಕೊಲೆಗೈದಿರುವ ಬಗ್ಗೆ ಗೃಹ ಮಂತ್ರಿಗಳವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹಮಂತ್ರಿಗಳು).—

೧. ದಿನಾಂಕ ೧೮-೧-೧೯೮೭ ರಂದರೆ ಮಂಡಲ್ ಪಂಚಾಯತ್ ಚುನಾವಣೆಗೆ ೨ ದಿವಸ ಮೊದಲು ಜಂಬರಘಟ್ಟ ಹಳ್ಳಿಯ ಶ್ರೀ ಸೈಯದ್ ಇಮಾಮ್‌ರವರ ಪತ್ನಿ ಶ್ರೀಮತಿ ನೂರ್ ಜಹಾನ್‌ರವರು ಮನೆಯಿಂದ ಕಾಣೆಯಾಗಿದ್ದಾರೆಂದು ಹಳೆ ಹೊನ್ನೂರಿನಿಂದ ಬಂದ ಒಬ್ಬಾತ ತಿಳಿಸಿದರು. ಆಂದು ಆಲ್ಲೇ ಇದ್ದ ಪಿ.ಎಸ್.ಐ. ಆದ ಶ್ರೀ ತಾಕಪ್ಪನವರು ಆಲ್ಲಿನ ನಿವಾಸಿಗಳ ಸಹಾಯದಿಂದ ಹುಡುಕಿದರು ಸಿಗಲಿಲ್ಲ. ಪುತ್ತಮಂತ್ರಲ ಹಳ್ಳಿಗಳಲ್ಲಿ ಈ ಬಗ್ಗೆ ದೂರು ಸ್ವೀಕರಿಸಲಾಗಿದ್ದರಿಂದ ಅಲ್ಲಿನ ಪೋಲೀಸರಿಗೆ ತಿಳಿಯಾಗಿದ್ದ ಹೆಂಗಸನ್ನು ಹುಡುಕಲು ಸೂಚನೆಯನ್ನು ಕೊಟ್ಟು ಹೋದರು.

೨. ದಿನಾಂಕ ೧೯-೧-೧೯೮೭ ರಂದು ಬೆಳಿಗ್ಗೆ ೯-೩೦ರ ಸಮಯದಲ್ಲಿ ಶ್ರೀ ಕರಿಯಣ್ಣನವರು ಮುಸ್ಲಿಂ ಮಹಿಳೆ ಕೊಲೆಯಾಗಿರುವುದಾಗಿ ಶಿವಮೊಗ್ಗ ಎಸ್. ಪಿ. ಯವರಿಗೆ ದೂರವಾಣಿ ಮೂಲಕ ತಿಳಿಸಿದರು. ಅವರು ಡಿ ವೈ.ಎಸ್.ಪಿ.ಗೆ ದೂರನ್ನು ತೆಗೆದುಕೊಂಡು ಕ್ರಮ ತೆಗೆದುಕೊಳ್ಳಲು ಆದೇಶಿಸಿದರು. ನಂತರ ಅಲ್ಪಸಂಖ್ಯಾತರಿಗೆ ಹಾಗೂ ಪರಿಶಿಷ್ಟ ಜಾತಿ ಪಂತ್ತು ಪರಿಶಿಷ್ಟ ಪಂಗಡದವರಿಗೆ ಕಿರುಕುಳ ಕೊಡುತ್ತಿರುವುದಾಗಿರುವುದಾಗಿಯೂ ಮತ್ತು ಮುಸ್ಲಿಂ ಮಹಿಳೆಯು ಕೊಲೆಯಾಗಿರುವುದಾಗಿಯೂ ಶ್ರೀ ಲೋಕೇಶಪ್ಪನವರು ಎಸ್. ಪಿ. ರವರಿಗೆ ದೂರವಾಣಿ ಮುಖಾಂತರ ದೂರನ್ನು ಕೊಟ್ಟರು.

೩. ಮೃತರ ಪತಿ ಶ್ರೀ ಸೈಯದ್ ಇಮಾಮ್‌ರವರು ೧೧-೩೦ ಗಂಟೆಯಲ್ಲಿ ಕೊಟ್ಟ ದೂರನ್ನು ಅಪರಾಧ ಸಂಖ್ಯೆ ೧೭/೮೭ರಲ್ಲಿ ಐಪಿಸಿಯ ಕಲಂ ೩೦೨, ೫೦೪, ೧೧೪ ದಾಖಲು ಮಾಡಿಕೊಂಡು ಪಿಆರ್. ಪಿ. ಸಿ. ೧೫ ಕಲಂ ೧೭೪ ರಂತೆ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಲಾಯಿತು. ನೂರ್ ಜಹಾನ್‌ರ ದೇಹವು ಬರಿಗಾಣ ಪರದಲ್ಲಿ ನೇತಾಡುತ್ತಿತ್ತು. ಮರಣೋತ್ತರ ವೈದ್ಯಕೀಯ ಪರೀಕ್ಷೆಯ ವರದಿಯಂತೆ ಇವರ ಸಾವು ನೇಣು ಹಾಕಿಕೊಂಡು ಸತ್ತಿರುವುದಾಗಿ ತಿಳಿಯುತ್ತದೆ.

೪. ಈ ವಿಷಯದಲ್ಲಿ ಕೊಟ್ಟ ದೂರಿನಲ್ಲಿ ಕಳಕಂಡ ೧೦ ಜನ ಆಪಾದಿತರ ಹೆಸರನ್ನು ತಿಳಿಸಲಾಗಿದೆ (೧) ದೇವೆಂದ್ರಪ್ಪ ಬಿನ್ ಧರ್ಮಪ್ಪ ೨) ರಾಜಪ್ಪ ಬಿನ್ ಧರ್ಮಪ್ಪ (೩) ಹನುಮಂತಪ್ಪ ಬಿನ್ ಕೆಂಚಪ್ಪ (೪) ರಾಮಪ್ಪ ಬಿನ್ ಕೆಂಚಪ್ಪ (೫) ಕೃಷ್ಣಪ್ಪ ಉರುಫ್ ಕಿಟ್ಟಪ್ಪ ಬಿನ್ ಕೆಂಚಪ್ಪ (೬) ಗಂಗಪ್ಪ ಹನುಮಂತಪ್ಪ ಬಿನ್ ರಾಮಪ್ಪ (೭) ರುದ್ರಪ್ಪ ಬಿನ್ ಬಸಪ್ಪ (೮) ಹನುಮಂತಪ್ಪ ಬಿನ್ ಬಸಪ್ಪ (೯) ಸುಬ್ಬಣ್ಣ ಮತ್ತು (೧೦) ಈಶಪ್ಪ.

೧೨-೩೦ ಪಿ.ಎಂ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈ ಕೊಲೆ ಆಗಿರತಕ್ಕದ್ದು ೧೮-೧-೧೯೮೭ ರಂದು. ಅವರು ಮರಕ್ಕೆ ನೇಣು ಹಾಕಿ ಸತ್ತಿದ್ದಾರೆಂದು ಹೇಳಿರತಕ್ಕದ್ದು ಸತ್ಯಕ್ಕೆ ಅತಿ ದೂರ ಇರತಕ್ಕ ವಿಚಾರ. ಈ ಬಗ್ಗೆ ನನ್ನ ಹತ್ತಿರ ಸಾಕಷ್ಟು ವಿವರಗಳು ಇವೆ. ಅಲ್ಲಿನ ಸಣ್ಣ ಕೊಂಬೆಗೆ ನೇಣು ಹಾಕಿದ್ದು ಕಾಲು ನೆಲದ ಮೇಲೆಯೇ ಇತ್ತು. ಆ ಒಂದು ಸ್ಥಿತಿಯಲ್ಲಿ ಅವರು ಸಾಯುವುದಕ್ಕೆ ಸಾಧ್ಯವೇ ಇಲ್ಲ. ಮತ್ತು ಆಕೆಯ ಮೈ ಮೇಲೆ ೧೨ ಕಚ್ಚಿದ ಗಾಯಗಳು ಇವೆ. ಹಾಗೂ ಆಕೆಯ ಮರ್ಮಾಂಗದ ಮೇಲೆ